ಆ) ಹಾಗಿದ್ದಲ್ಲಿ ಇಂಥ ವಾಣಿಜ್ಯ ಸಂಸ್ಥೆಗಳನ್ನು ರಾಷ್ಟ್ರೀಕರಣಗೊಳಿಸಲು ಸರ್ಕಾರದವರು ಉದ್ದೇಶಿಸುವರೆ? ಹಾಗಿಲ್ಲದಿದ್ದಲ್ಲಿ ಸರ್ಕಾರದವರಿಗೆ ಇರುವ ತೊಂದರೆಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಆ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ರಾಥಮಿಕ ಶಿಕ್ಷಣ ಇಲಾಖೆಗೆ ಉಪಾಧ್ಯಾಯರ ನೇಮಕಾತಿ ಬಗ್ಗೆ

೧೩೫೯(೨೬೯೫) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ). ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತುಮಕೂರು ಜಿಲ್ಲಾ ಪ್ರಾಥಮಿಕ ಶಿಕ್ಷಣ ಇಲಾಖೆಗೆ ಉಪಾಧ್ಯಾಯರ ಆಯ್ಕೆಗಾಗಿ ಅಭ್ಯರ್ಥಿಗಳಿಂದ ಅರ್ಜಿ ಪಡೆದಿರುವುದು ನಿಜವೇ?

ಆ) ಈ ಹುದ್ದೆಗಳಿಗೆ ಆಯ್ಕೆ ಮಾಡುವಾಗ ಅಂಕಿಗಳ ಅರ್ಹತೆ ಆಧಾರದ ಮೇಲೆ ಆಯ್ಕೆ ಮಾಡಬೇಕೆಂಬುದನ್ನು ಸರ್ಕಾರ ಸೂಚನೆ ನೀಡಿದೆಯೇ?

ಇ) ಹಾಗಿದ್ದಲ್ಲಿ ಉದ್ಯೋಗ ಪಡೆಯಲು ಅರ್ಜಿ ಸಲ್ಲಿಸಿದ್ದು ವಯೋಮಿತಿ ಮೀರಿರುವ ಹಾಗೂ ಮೀರುತ್ತಿರುವ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೇ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಹೌದು.

ಆ) ಎಸ್.ಎಸ್.ಎಲ್.ಸಿ. ಮತ್ತು ಟಿ.ಸಿ.ಎಚ್. ಪರೀಕ್ಷೆಗಳ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳ ಸಂದರ್ಶನ ಕರೆಯಲು ಅರ್ಹತಾಪಟ್ಟಿ ತಯಾರಿಸಿ ಮೇಲ್ಕಂಡ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳ ಹಾಗೂ ಸಂದರ್ಶನದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಇ) ಸರ್ಕಾರೀ ಸೇವೆಗೆ ನೇಮಕಾತಿ ನಿಯಮಗಳಲ್ಲಿ ವಯಸ್ಸನ್ನು ನಿಗದಿ ಪಡಿಸಲಾಗಿದೆ. ಅದನ್ನೇ ಶಿಕ್ಷಣ ಇಲಾಖೆಯಲ್ಲೂ ಅನುಸರಿಸಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿಗಳು

೧೩೬೦(೨೬೪೫) ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಸಣ್ಣ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಪೂರ್ತಿಗೊಂಡಿದ್ದು ಕಾರ್ಯಾಚರಣೆಯಲ್ಲಿರುವ ಏತ ನೀರಾವರಿಗಳ ಸಂಖ್ಯೆ ಎಷ್ಟು?

ಆ) ೧೯೮೮–೮೯ನೇ ಸಾಲಿನಲ್ಲಿ ಮಂಜೂರಾಗಿರುವ ಏತ ನೀರಾವರಿಗಳು ಎಷ್ಟು? ಅವು ಯಾವ ಯಾವ ತಾಲ್ಲೂಕುಗಳಿಗೆ ಮಂಜೂರು ಆಗಿವೆ?

ಇ) ಹೊಸ ಏತ ನೀರಾವರಿಗಳು ಕಾರ್ಯಾಚರಣೆಯಲ್ಲಿ ಬರಲು ಅನುಸರಿಸಬೇಕಾದ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ನೀರಾವರಿ ಮಂತ್ರಿಗಳು).—

ಅ) ೧೪.

ಆ) ಬಿಜಾಪುರದ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ನಿಯಮಿತದ ೧೯೮೮–೮೯ರ ವಾರ್ಷಿಕ ಕಾರ್ಯಕ್ರಮದಡಿಯಲ್ಲಿ ೬ ಏತ ನೀರಾವರಿ ಯೋಜನೆಗಳನ್ನು ಸೇರಿಸಿದ್ದು ಅವುಗಳ ತಾಲ್ಲೂಕುವಾರು ವಿವರಗಳು ಕೆಳಕಂಡಂತಿವೆ:—

ತಾಲ್ಲೂಕು	ಏತ ನೀರಾವರಿ ಯೋಜನೆಗಳ ಸಂಖ್ಯೆ
ಸೂಪ	೧
ಸಿರಸಿ	೧
ಹೊನ್ನಾವರ	೧
ಮುಂಡಗೋಡ	೧
ಯಲ್ಲಾಪುರ	೨
	೬

೩) ೧. ಏತ ನೀರಾವರಿ ಯೋಜನೆಯ ಅಂದಾಜು ವೆಚ್ಚದ ಶೇಕಡಾ ೧೦ ರಷ್ಟನ್ನು ಸರ್ಕಾರವು ಭರಿಸುವುದು ಮತ್ತು ಶೇಕಡಾ ೧೫ ರಷ್ಟನ್ನು ಫಲಾನುಭವಿಗಳು ಭರಿಸಬೇಕು. ಉಳಿದ ಶೇಕಡಾ ೭೫ ಭಾಗವನ್ನು ನಿಗಮವು ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯಬೇಕು.

೨. ಅಲ್ಲದೇ ಯೋಜನೆಯ ನಿರ್ವಹಣಾ ವೆಚ್ಚ, ನಿರ್ವಾಣಕ್ಕೆ ಪಡೆದ ಸಾಲ ಮತ್ತು ಸಾಲದ ಮೇಲಿನ ಬಡ್ಡಿ ಹಣವನ್ನು, ನಿಗಮವು ನಿರ್ದಿಷ್ಟಪಡಿಸಿದ ನೀರಿನ ದರವನ್ನು ಹಣಕಾಸು ಸಂಸ್ಥೆಗೆ (ಬ್ಯಾಂಕು) ಭರಿಸಲು ಸಾಧ್ಯವಾಗುವಂತೆ ಜಮೀನುಗಳಿಗೆ ನೀರು ಒದಗಿಸಿದ ವರ್ಷದಿಂದ ವಾರ್ಷಿಕ ಕಂತುಗಳಲ್ಲಿ ಕಟ್ಟಲು ಒಪ್ಪಿ ಫಲಾನುಭವಿಗಳು ಯೋಜನೆಯ ಜಲಸೇಚನೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆಯೇ ಮುಚ್ಚಳಿಕೆಯನ್ನು ಬರೆದು ಕೊಡಬೇಕು.

ಮಾಲೂರಂ ತಾಲ್ಲೂಕಿನಲ್ಲಿ ರಸ್ತೆಗಳ ಅಭಿವೃದ್ಧಿ ಬಗ್ಗೆ

೧೩೬೧(೨೬೫೩) ಶ್ರೀ ಹೆಚ್. ಬಿ. ದ್ಯಾವೀರಪ್ಪ (ಮಾಲೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮಾಲೂರು ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿ ಬಗ್ಗೆ ಆಯವ್ಯಯಕ್ಕೆ ಸೇರಿಸಿದ ರಸ್ತೆಗಳ ಸಂಖ್ಯೆ ಎಷ್ಟು? ಮತ್ತು ಇದಕ್ಕಾಗಿ ಅಂದಾಜು ಮಾಡಿರುವ ಹಣವೆಷ್ಟು?

ಆ) ಈ ರಸ್ತೆಗಳ ಅಭಿವೃದ್ಧಿಗಾಗಿ ಹಣ ಖರ್ಚು ಮಾಡಲಾಗಿದೆಯೇ? ಮಾಡದಿದ್ದಲ್ಲಿ ಕಾರಣವೇನು?

ಇ) ಈ ವರ್ಷವಾದರೂ ಸದರಿ ರಸ್ತೆಗಳನ್ನು ದುರಸ್ತಿ ಪಡಿಸಲು ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುವರೇ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ೧೯೮೮-೮೯ನೇ ಸಾಲಿನ ಜಿಲ್ಲಾ ಪರಿಷತ್‌ನ ಆಯವ್ಯಯದಲ್ಲಿ ಒಟ್ಟು ೨೩ ರಸ್ತೆ ಮತ್ತು ಸೇತುವೆ ಕಾಮಗಾರಿಗಳು ಸೇರಿವೆ. ಇವುಗಳ ಅಂದಾಜು ಹಣ ೫೬.೦೦ ಲಕ್ಷ ರೂಗಳು.

ಆ) ೧೯೮೭-೮೮ರಲ್ಲಿ ಜಿಲ್ಲಾ ಯೋಜನೆಯಲ್ಲಿ ೪.೮೪ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಯೋಜನೇತರ ಶೀರ್ಷಿಕೆಯಲ್ಲಿ ೭.೯೬ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಇ) ಆರ್ಥಿಕ ಲಭ್ಯತೆಗನುಗುಣವಾಗಿ ಕೆಲಸಗಳನ್ನು ತಗೆದುಕೊಳ್ಳಲಾಗುವುದು.

ಕೋಲಾರ ಜಿಲ್ಲೆಯಲ್ಲಿರುವ ಕೆರೆಗಳ ಬಗ್ಗೆ

೧೩೬೨(೨೬೫೬) ಶ್ರೀ ಹೆಚ್. ಬಿ. ದ್ಯಾವೀರಪ್ಪ (ಮಾಲೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೋಲಾರ ಜಿಲ್ಲೆಯಲ್ಲಿರುವ ಭಾರಿ ಮತ್ತು ಸಣ್ಣ ಕೆರೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)